**ಓ ಎಸ್ ನಂಃ 24/2020**

**ಪಿ ಡಬ್ಲ್ಯೂ ಃ 1**

**ದಿಃ 20.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಎಸ್ ವಕೀಲರಿಂದ :-**

ತೋಟಲಯ್ಯನವರ 1 ನೇ ಮಗ ಗಂಗಯ್ಯನವರಿಗೆ ಎಷ್ಟು ಜನ ಮಕ್ಕಳಿದ್ದಾರೆ ಅವರು ಎಲ್ಲಿ ಎಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು 4 ಜನ ಮಕ್ಕಳಿದ್ದು ಅವರೆಲ್ಲರೂ ಅಣ್ಣೇಶಾಸ್ತ್ರೀಪಾಳ್ಯದಲ್ಲಿ ವಾಸವಾಗಿದ್ದಾರೆ. ಅವರೆಲ್ಲರೂ ವ್ಯವಸಾಯ ವೃತ್ತಿಯನ್ನು ಮಾಡಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ತೋಟಲಯ್ಯನವರ 2 ನೇ ಮಗ ಕೆಂಪಯ್ಯನವರಿಗೆ ಎಷ್ಟು ಜನ ಮಕ್ಕಳಿದ್ದಾರೆ ಅವರು ಎಲ್ಲಿ ಎಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು 3 ಜನ ಮಕ್ಕಳಿದ್ದು ಅವರೆಲ್ಲರೂ ಅಣ್ಣೇಶಾಸ್ತ್ರೀಪಾಳ್ಯದಲ್ಲಿ ವಾಸವಾಗಿದ್ದಾರೆ. ಅವರೆಲ್ಲರೂ ವ್ಯವಸಾಯ ವೃತ್ತಿಯನ್ನು ಮಾಡಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. 10 ನೇ ಪ್ರತಿವಾದಿಗೆ ದೊಡ್ಡಯ್ಯನವರಿಗೆ ಎಷ್ಟು ಜನ ಮಕ್ಕಳಿದ್ದಾರೆ ಮತ್ತು ಅವರೆಲ್ಲರೂ ಎಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 4 ಜನ ಮಕ್ಕಳು ಅವರೆಲ್ಲರೂ ರಘುನಾಥಪುರದಲ್ಲಿ ವಾಸವಾಗಿದ್ದಾರೆ. 11 ನೇ ಪ್ರತಿವಾದಿಯು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ತೋಟಲಯ್ಯನವರ ಮಕ್ಕಳಾದ ಗಂಗಯ್ಯ, ಕೆಂಪಯ್ಯ ಮತ್ತು ದೊಡ್ಡಯ್ಯನವರು ಎಷ್ಟು ವರ್ಷಗಳಿಂದ ಬೇರೆ ಬೇರೆಯಾಗಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಅವರೆಲ್ಲರೂ 15 ವರ್ಷ ಗಳಿಂದ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದಾರೆ. ಅವರೆಲ್ಲರಿಗೂ ಜೀವನಕ್ಕೆ ಅವಶ್ಯಕವಾದ ಎಲ್ಲಾ ದಾಖಲಾತಿಗಳು ಪ್ರತ್ಯೇಕವಾಗಿ ಇವೆ ಎಂದರೆ ಸರಿ. 11 ನೇ ಪ್ರತಿವಾದಿಯ ತಾಯಿ ಗಂಗಮ್ಮ ಹಾಗೂ ತಾವು ತೋಟಲಯ್ಯನವರ ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಿದ್ದೀರ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ತಹಶೀಲ್ದಾರ್ ಕಛೇರಿಯಿಂದ ವಾದಿಗಳು ಮತ್ತು ಪ್ರತಿವಾದಿ ಒಂದೇ ಕುಟುಂಬದ ಸದಸ್ಯರು ಎಂದು ತೋರಿಸಲು ವಂಶವೃಕ್ಷವನ್ನು ಪಡೆಯಲು ತಮಗೆ ಏನಾದರೂ ತೊಂದರೆ ಇತ್ತ ಎಂದರೆ ಸಾಕ್ಷಿಯು ನನಗೆ ತೊಂದರೆ ಇರಲಿಲ್ಲ. ತೋಟಲಯ್ಯನವರ 1 ನೇ ಮಗ ಗಂಗಯ್ಯನವರ ಅಂತಿಮ ಸಂಸ್ಕಾರವನ್ನು ಅಣ್ಣೇಶಾಸ್ತ್ರೀ ಪಾಳ್ಯದಲ್ಲಿ ಜರುಗಿಸಲಾಗಿತ್ತು ಎಂದರೆ ಸರಿ. ತೋಟಲಯ್ಯನವರ ಮಕ್ಕಳಲ್ಲಿ ಒಬ್ಬರಾದ 10 ನೇ ಪ್ರತಿವಾದಿಯು ಮಾತ್ರ ಜೀವಂತ

ಇದ್ದಾರೆ ಎಂದರೆ ಸರಿ. ಗಂಗಮ್ಮ ನವರು ಯಾವ ದಿನಾಂಕದಂದು ಮರಣಹೊಂದಿದ್ದಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ಸಾಕ್ಷ್ಯನುಡಿಯುತ್ತಾರೆ. ತೋಟಲಯ್ಯನವರು ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಎಂದು ತೋರಿಸಲು ನಾನು ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ತೋಟಲಯ್ಯನವರ ಮಗ ಗಂಗಯ್ಯ ಮತ್ತು ಕೆಂಪಯ್ಯರವರು ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯ ವಿವಾಹವು ಯಾವ ವರ್ಷ ದಲ್ಲಿ ನೆರವೇರಿರುತ್ತದೆ ಎಂದರೆ ಸಾಕ್ಷಿಯು 1965 ನೇ ಸಾಲಿನಲ್ಲಿ ನೆರವೇರಿರುತ್ತದೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ನಮೂದು ಮಾಡಿರುವ 1 ನೇ ಪ್ರತಿವಾದಿಯ ವಯಸ್ಸು ನಾನು ಹೇಳಿ ಬರೆಸಿರುತ್ತೇನೆ. 1965 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯ ಮದುವೆ ಆಗಿದೆ ಎಂದು ತೋರಿಸಲು ನಾನು ದಾಖಲಾತಿಯನ್ನು ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿಗೆ 1965 ನೇ ಸಾಲಿನಲ್ಲಿ ಮದುವೆ ಆಗಿಲ್ಲದಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ತೋಟಲಯ್ಯನವರು ಯಾವ ವರ್ಷದಲ್ಲಿ ಮರಣ ಹೊಂದಿದ್ದರು ಎಂಬ ವಿಚಾರವನ್ನು ನನಗೆ ಈಗ ಹೇಳಲು ಬರುವುದಿಲ್ಲ. ಗಂಗಯ್ಯ ಮತ್ತು ಕೆಂಪಯ್ಯನವರು ಯಾವ ದಿನಾಂಕದಂದು ಹಾಗೂ ಯಾವ ವರ್ಷದಂದು ಮರಣ ಹೊಂದಿರುತ್ತಾರೆ ಎಂಬ ವಿಚಾರ ನನಗೆ ಈಗ ನೆನಪಿಲ್ಲ. 6 ನೇ ಪ್ರತಿವಾದಿಯ ವಿವಾಹ ಯಾವ ವರ್ಷದಲ್ಲಿ ನೆರವೇರಿದೆ ಎಂದು ಈಗ ನೆನಪಿಲ್ಲ. 10 ನೇ ಪ್ರತಿವಾದಿಯ ಹೆಂಡತಿಯ ಹೆಸರು ದೊಡ್ಡಮ್ಮ. ದೊಡ್ಡಮ್ಮನವರಿಗೆ 4 ಜನ ಮಕ್ಕಳಿದ್ದಾರೆ. ದಾವಾ ಸ್ವತ್ತುಗಳ ವಿಸ್ತೀರ್ಣ, ಚಕ್ಕುಬಂದಿ ಮತ್ತು ಸರ್ವೆ ನಂ. ನ್ನು ನನಗೆ ಈಗ ಹೇಳಲು ಬರುವುದಿಲ್ಲ. ದಾವಾ ಸ್ವತ್ತುಗಳ ಕಂದಾಯ ದಾಖಲಾತಿಗಳು ದಾವಾ ಸಲ್ಲಿಸುವ ಸಂದರ್ಭದಲ್ಲಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ತೋಟಲಯ್ಯನವರ ಹೆಸರಿನಲ್ಲಿದೆ. ತೋಟಲಯ್ಯನವರ ಮಕ್ಕಳು ಯಾವ ಯಾವ ಸರ್ವೆ ನಂ. ನಲ್ಲಿ ಎಷ್ಟು ವಿಸ್ತೀರ್ಣ ಜಮೀನುಗಳಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 10 ನೇ ಪ್ರತಿವಾದಿಯು ರಘುನಾಥಪುರದಲ್ಲಿ ಉಳುಮೆ ಮಾಡುತ್ತಿದ್ದಾರೆ. 1 ನೇ ಪ್ರತಿವಾದಿಯ ಮಕ್ಕಳು ಅಣ್ಣೇಶಾಸ್ತ್ರಿ ಪಾಳ್ಯದಲ್ಲಿರುವ ಜಮೀನುಗಳಲ್ಲಿ ಉಳುಮೆ ಮಾಡುತ್ತಿದ್ದಾರೆ. ಕೆಂಪಯ್ಯನವರು ರಘುನಾಥಪುರದಲ್ಲಿರುವ ಜಮೀನುಗಳಲ್ಲಿ ಉಳುಮೆಯನ್ನು ಮಾಡುತ್ತಿದ್ದಾರೆ.

**ಓ ಎಸ್ ನಂಃ 24/2020**

**ಪಿ ಡಬ್ಲ್ಯೂ ಃ 1**

ಮೇಲ್ಕಂಡ ವ್ಯಕ್ತಿಗಳು 10 ವರ್ಷಗಳಿಂದ ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದಾರೆ. ಅಣ್ಣೇಶಾಸ್ತ್ರೀ ಪಾಳ್ಯ ಸರ್ವೆ ನಂ. 23/2 ರಲ್ಲಿ 2 ಎಕರೆ ಮತ್ತು ಸರ್ವೆ ನಂ. 26/2 ರಲ್ಲಿ 36 ಗುಂಟೆ ಮತ್ತು ಸರ್ವೆ ನಂ. 26/13 ರಲ್ಲಿ 2 ಗುಂಟೆ ಜಮೀನುಗಳಲ್ಲಿ ಗಂಗಯ್ಯ ಮತ್ತು ಅವರ ಕುಟುಂಬದ ಸದಸ್ಯರು ಉಳುಮೆ ಮಾಡುತ್ತಿದ್ದಾರೆ.

ಕೆಂಪಯ್ಯನವರ ಕುಟುಂಬದವರು ರಘುನಾಥಪುರದ ಸರ್ವೆ ನಂ. 3 ರಲ್ಲಿ 1 ಎಕರೆ 39 ಗುಂಟೆ, ಸರ್ವೆ ನಂ. 71/2 ರಲ್ಲಿ 4 ಗುಂಟೆ, ಸರ್ವೆ ನಂ. 71/4 ರಲ್ಲಿ 1 ಗುಂಟೆ, ಸರ್ವೆ ನಂ. 71/8 ರಲ್ಲಿ 3 ಗುಂಟೆ, ಸರ್ವೆ ನಂ. 71/10 ರಲ್ಲಿ 2 ಗುಂಟೆ, ಸರ್ವೆ ನಂ. 16 ರಲ್ಲಿ 9 ಗುಂಟೆ, ಸರ್ವೆ ನಂ. 78 ರಲ್ಲಿ ಕೆಂಪಯ್ಯ ಮತ್ತು 10 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದಾರೆ. ಸದರಿ ವಿಚಾರಗಳು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನನಗೆ ಮಾಹಿತಿ ಇತ್ತು. ಸದರಿ ವಿಚಾರವನ್ನು ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಸದರಿ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**